ಮೂಲ ದಾವಾ ಸಂಖ್ಯೆ 115/2016 ಪಿ ಡಬ್ಲ್ಯೂ 1 ಸಿದ್ದಪ್ಪ ಬಿನ್ ಕೊಟ್ರಪ್ಪ

(ದಿನಾಂಕ 27-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಎ ಜಿ ಪಿ ರವರಿಂದಃ-

1 ನೇ ಪ್ರತಿವಾದಿಯ ವಿರುದ್ದ ಅಕ್ರಮವಾಗಿ ಪೈಪ್ ಲೈನ್ ಮಾಡುತ್ತಿರುವ ಬಗ್ಗೆ ನಾನು ದಾವೆಯನ್ನು ದಾಖಲಿಸಿರುತ್ತೇನೆ. 1 ನೇ ಪ್ರತಿವಾದಿಯು ಹೊಳೆಯಿಂದ ಸುಮಾರು 2 ಕಿ ಮೀ ಅಕ್ರಮವಾಗಿ ಪೈಪ್ ಲೈನ್ ಅಳವಡಿಸಿರುತ್ತಾರೆ, ಯಾರ ಹೊಲದಲ್ಲಿಯೂ ಕೂಡಾ ಪೈಪ್ ಲೈನನ್ನು ಅಳವಡಿಸಿರುವುದಿಲ್ಲ. 1 ನೇ ಪ್ರತಿವಾದಿಯ ಸರ್ವೆ ನಂಬರ್ ಹೇಳಲು ಬರುವುದಿಲ್ಲ, ಆದರೆ 3 ಎಕರೆ ಸ್ವತ್ತು ಇರುತ್ತದೆ. ನನ್ನ ಹೆಸರಿನಲ್ಲಿರುವ ಹೊಲದ ಸರ್ವೆ ನಂ. 352 ಆಗಿರುತ್ತದೆ.

ನಾವು ಹೊಸಪೇಟೆ ಮತ್ತು ಹಡಗಲಿ ನೀರಾವರಿ ಇಲಾಖೆಯವರಿಗೆ ಸದರಿ ವಿವಾದದ ಸಂಬಂಧ ಅರ್ಜಿಯನ್ನು ಕೊಟ್ಟರೂ ಅವರು ಯಾವುದೇ ಕ್ರಮವನ್ನು ತೆಗೆದುಕೊಳ್ಳದ ಕಾರಣ ಸಹಾಯ ಕಾರ್ಯಪಾಲಕ ಅಭಿಯಂತರರ ವಿರುದ್ಧವೂ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಸದರಿ ಹಳ್ಳವು ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತದೆ. ನಾವು ನೀರಾವರಿ ಇಲಾಖೆಗೆ ಅರ್ಜಿಯನ್ನು ಕೊಟ್ಟಿರುತ್ತೇವೆ. ಸದರಿ ಇಲಾಖೆಯನ್ನು ನಮ್ಮ ಅರ್ಜಿಗೆ ಯಾವುದೇ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ. ನಿಪಿ-2 ರ ಅರ್ಜಿಗೆ ಹೂವಿನಹಡಗಲಿ ಸಣ್ಣ ನೀರಾವರಿ ಇಲಾಖೆಯವರು ಎಷ್ಟು ಬಾರಿ ಕೇಳಿದರೂ ಉತ್ತರವನ್ನು ಕೊಡದ ಕಾರಣ ದಾವೆಯನ್ನು ದಾಖಲಿಸಿರುತ್ತೇವೆ. 2 ನೇ ಪ್ರತಿವಾದಿಯು ನಿಪಿ-2 ರ ವಿವಾದವು ಅವರ ವ್ಯಾಪ್ತಿಗೆ ಬರುವುದಿಲ್ಲವೆಂದು ನಮಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ.

(2 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೇಳಿದರು, ನೀಡಲಾಯಿತು)

ಮೂಲ ದಾವಾ ಸಂಖ್ಯೆ 115/2016 ಪಿ ಡಬ್ಲ್ಯೂ 1 ಸಿದ್ದಪ್ಪ ಬಿನ್ ಕೊಟ್ರಪ್ಪ

<u>ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀಮತಿ ಎ ಎಸ್ ಬಿ ವಕೀಲರವರಿಂದಃ-</u>

ನನ್ನ ಜಮೀನಿನ ಪಹಣಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂ. 104 ಇದು 3 ನೇ ಪ್ರತಿವಾದಿಗೆ ಸಂಬಂಧಪಟ್ಟಂತಹ ಸ್ವತ್ತಾಗಿದ್ದು ಟಿ ಬಿ ಪಾಜೆಕ್ಟಗೆ ಸಂಬಂಧಪಟ್ಟಂತಹ ಜಾಗವಾಗಿರುತ್ತದೆಂದರೆ ಸರಿ. ಸದರಿ ಸರ್ವೆ ನಂ.104 ರಲ್ಲಿ ಪೈಪ್ ಲೈನನ್ನು ತೆಗೆದುಕೊಳ್ಳಬೇಕಾದರೆ ಅನುಮತಿಯನ್ನು ಕೊಡುವಂತಹ ಅಧಿಕಾರವು 3 ನೇ ಪ್ರತಿವಾದಿಗೆ ಮಾತ್ರ ಇದ್ದು 2 ನೇ ಪ್ರತಿವಾದಿಗೆ ಸಂಬಂಧಪಟ್ಟಿರುವುದಿಲ್ಲವೆಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸರ್ವೆ ನಂ.104 ರಿಂದ ಪೈಪ್ ಲೈನನ್ನು ತೆಗೆದುಕೊಂಡಿರುವುದಿಲ್ಲ. 3 ನೇ ಪ್ರತಿವಾದಿಯ ಹೊಲದಲ್ಲಿ ಫಿಶ್ ಪಾಂಡ್ ಇರುತ್ತದೆಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಹೊಲದಲ್ಲಿರುತ್ತದೆಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ